**ದಿನಾಂಕ:03-06-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು: ವಾದಿ ಪರ ವಕೀಲರಿಂದ :**

ನನ್ನ ವಿವಾಹಕ್ಕಿಂತ ಪೂರ್ವದಲ್ಲಿಯೇ ನಮ್ಮ ಕುಟುಂಬಕ್ಕೆ ಸೇರಿದ ಸ್ವತ್ತುಗಳ ಕುರಿತು ನನ್ನ ಮತ್ತು ನನ್ನ ಸಹೋದರ ಸಹೋದರಿಯರ ನಡುವೆ ವಿಭಾಗ ಏರ್ಪಟ್ಟಿದೆ. ನಾನು ಮತ್ತು ನನ್ನ ಕುಟುಂಬದವರು ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿ, ವಿಭಾಗವನ್ನು ಮಾಡಿಕೊಂಡಿದ್ದೇವೆ. ಸದರಿ ನ್ಯಾಯಾಲಯದ ಡಿಕ್ರಿಯಂತೆ ವಿಭಾಗ ಆದ ಸ್ವತ್ತುಗಳ ಕುರಿತು ನಮ್ಮ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ. 2018-19 ರಲ್ಲಿ ನಮ್ಮ ಕುಟುಂಬದಲ್ಲಿ ವಿಭಾಗ ಏರ್ಪಟ್ಟಿರುತ್ತದೆ ಎಂದರೆ ಸರಿ. ಸದರಿ ವಿಭಾಗದಂತೆ ನನ್ನ ಹಿಸ್ಸೆಗೆ ಬಂದಿರುವ ಸ್ವತ್ತುಗಳ ಕುರಿತು ನಾನು ಸ್ವಾಧೀನ ಹೊಂದಿರುತ್ತೇನೆ ಎಂದರೆ ಸರಿ. ನನ್ನ ಹಿಸ್ಸೆಗೆ ಒಂದು ಎಕರೆ ಜಮೀನು ಬಂದಿರುತ್ತದೆ, ಯಾವುದೇ ನಿವೇಶನಗಳು ಬಂದಿರುವುದಿಲ್ಲ. ನಿಪಿ-10 ರಿಂದ 19 ವರೆಗಿನ ದಾಖಲಾತಿಗಳಂತೆ ಹಾಜರು ಪಡಿಸಿರುವ ಆಸ್ತಿ ತೆರಿಗೆ ಪಟ್ಟಿಯ ನಿರ್ಧರಣಾ ದಾಖಲೆಗಳಂತೆ ಸದರಿ ಸ್ವತ್ತುಗಳು ನಮ್ಮ ಕುಟುಂಬಕ್ಕೆ ಸೇರಿದ್ದು ನನ್ನ ತಂದೆಯ ಹೆಸರಿನಲ್ಲಿ ಖಾತೆ ಇದೆ. ಅವುಗಳ ಪ್ರಕಾರ ನಮ್ಮ ಕುಟುಂಬದವರು ಸದರಿ ಸ್ವತ್ತುಗಳ ಸ್ವಾದೀನವನ್ನು ಹೊಂದಿದ್ದಾರೆ ಎಂದರೆ ಸರಿ.

ನನ್ನ ಮತ್ತು ನನ್ನ ಪತ್ನಿಯ ದಾಂಪತ್ಯ ಜೀವನದಲ್ಲಿ ಅನ್ಯೋನ್ಯತೆ ಇಲ್ಲದ ಕುರಿತು ಯಾವುದೇ ದೂರನ್ನು ನೀಡಿರಲಿಲ್ಲ ಬದಲಾಗಿ ಪಂಚಾಯಿತಿಯನ್ನು ಮಾಡಲಾಗಿತ್ತು. ನನ್ನ ಮತ್ತು ಅರ್ಜಿದಾರರ ಕುಟುಂಬದವರು ಸೇರಿ ಪಂಚಾಯಿತಿಯನ್ನು ಮಾಡಲಾಗಿತ್ತು.

**(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಎದುರುದಾರರು ತಕರಾರಿನಲ್ಲಿ ಸಲ್ಲಿಸಿರುವ ಅಂಶಗಳ ಕುರಿತು ಕೆಲವೊಂದು ಪ್ರಶ್ನೆಗಳನ್ನು ಕೇಳುವ ಅಗತ್ಯತೆ ಇದೆ ಎಂದು ಹೇಳಿದ್ದು, ಹಾಗಾಗಿ ನ್ಯಾಯಾಲಯದ ಆವರಣದಿಂದ ಉಭಯ ಪಕ್ಷಗಾರರ ವಕೀಲರನ್ನು ಮತ್ತು ಸಾಕ್ಷಿಯನ್ನು ಹೊರತುಪಡಿಸಿ ಇತರೆ ಎಲ್ಲರನ್ನೂ ಹೊರಗೆ ಕಳುಹಿಸಿ ಬಾಗಿಲನ್ನು ಮುಚ್ಚಿ ಸಾಕ್ಷ್ಯವನ್ನು ದಾಖಲು ಮಾಡಲಾಗುತ್ತದೆ ಎಂದು ಆದೇಶಿಸಿ ಅದರಂತೆ ಸಾಕ್ಷ್ಯವನ್ನು ದಾಖಲು ಮಾಡಲಾಗುತ್ತದೆ)**

ನನ್ನ ತಕರಾರಿನಲ್ಲಿ ನಮೂದಿಸಿರುವ ನವೀನ ಎಂಬ ವ್ಯಕ್ತಿ ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ. ಸದರಿ ನವೀನ ಎಂಬುವವನೊಂದಿಗೆ ನನ್ನ ಪತ್ನಿ ಮೊಬೈಲ್ ಮೂಲಕ ಯಾವಾಗಲೂ ಮಾತನಾಡುತ್ತಿದ್ದರು. ಸದರಿ ನವೀನ ಎಂಬುವವನ ಮೊಬೈಲ್ ಸಂಖ್ಯೆ ನನಗೆ ಗೊತ್ತಿದ್ದು ಈ ಕುರಿತು ನನ್ನ ತಕರಾರಿನಲ್ಲಿ ಹೇಳಿಲ್ಲ ಹಾಗೂ ನವೀನ ಎಂಬುವವನ ಕುರಿತಾಗಿ ನಾನು ಪೊಲೀಸ್ ಠಾಣೆಗೆ ಯಾವುದೇ ದೂರನ್ನು ನೀಡಿಲ್ಲ. ನಾನು ಆ ರೀತಿ ಮೊಬೈಲ್ ಸಂಖ್ಯೆಯನ್ನು ತಕರಾರಿನಲ್ಲಿ ನಮೂದು ಮಾಡಲು ತೊಂದರೆ ಇರಲಿಲ್ಲ. ನವೀನ್ ಎಂಬ ವ್ಯಕ್ತಿ ನಮ್ಮ ಮದುವೆಯ ಕಾಲಕ್ಕೆ ಬಂದಿರಲಿಲ್ಲ. ಮದುವೆಯ ನಂತರ ಕೂಡ ನವೀನ್ ಎಂಬ ವ್ಯಕ್ತಿ ನಮ್ಮ ಮನೆಗೆ ಯಾವತ್ತೂ ಬಂದಿರಲಿಲ್ಲ. ನನ್ನ ಪತ್ನಿಯೇ ಕಡೂರಿಗೆ ವಾರಕ್ಕೊಮ್ಮೆ ಮತ್ತು

ಹದಿನೈದು ದಿನಕ್ಕೊಮ್ಮೆ ಬರುತ್ತಿದ್ದರು. ನಾನು ನವೀನ್ ಎಂಬ ವ್ಯಕ್ತಿಯ ಮುಖವನ್ನು ನೋಡಿಲ್ಲ. ನವೀನ್ ಎಂಬ ವ್ಯಕ್ತಿ ಯಾವತ್ತಿಗೂ ಕೂಡ ನನ್ನ ಪತ್ನಿಯ ಜೊತೆ ಬಂದಿಲ್ಲ. ನಾನು ನನ್ನ ಪತ್ನಿ ನವೀನ್ ಎಂಬ ವ್ಯಕ್ತಿಯೊಂದಿಗೆ ಇದ್ದುದನ್ನು ಯಾವತ್ತೂ ಕೂಡ ನೋಡಿಲ್ಲ. ಸಾಕ್ಷಿಯು ಮುಂದುವರೆದು, ನನ್ನ ಪತ್ನಿಯೇ ನನ್ನ ಬಳಿ ನಾನು ಕೂಲಿ ಮಾಡಿಯಾದರೂ ಕೂಡ ನವೀನ್ ರವರ ಜೊತೆಯಲ್ಲಿಯೇ ಇರುತ್ತೇನೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ.

ನಾನು ನವೀನ್ ಎಂಬ ವ್ಯಕ್ತಿಯ ಕುರಿತು ಆತನ ವಿಳಾಸ ಮತ್ತು ಇತರೆ ವಿಚಾರದ ಬಗ್ಗೆ ಖುದ್ದು ತಿಳಿದುಕೊಂಡಿಲ್ಲ ಆದರೆ ಸದರಿ ನವೀನ್ ಎಂಬುವವನು ಬೆಂಗಳೂರಿನಲ್ಲಿ ಟ್ಯಾಕ್ಸಿ ಓಡಿಸುತ್ತಿದ್ದಾನೆ ಎಂದು ನನ್ನ ಪತ್ನಿ ಹೇಳಿದ್ದರು. ಸದರಿ ನವೀನ್ ಎಂಬ ವ್ಯಕ್ತಿಯನ್ನು ಕರೆಸಿ ನಾವು ಯಾವುದೇ ವಿಚಾರಣೆಯನ್ನು ಕೂಡ ಮಾಡಿಲ್ಲ. ವಿವಾಹದ ಒಂದು ವಾರದ ನಂತರ ನಾನು ಮತ್ತು ನನ್ನ ಪತ್ನಿ ಒಟ್ಟಿಗೇ ವಾಸವಿದ್ದೆವು. ಅರ್ಜಿದಾರರು ನವೀನ್ ಎಂಬ ವ್ಯಕ್ತಿಯೊಂದಿಗೆ ಯಾವತ್ತೂ ಕೂಡ ಸಂಬಂಧ ಹೊಂದಿಲ್ಲದಿದ್ದರೂ ಕೂಡ ಆಕೆಗೆ ಜೀವನಾಂಶ ಕೊಡುವುದನ್ನು ತಪ್ಪಿಸುವ ಸಲುವಾಗಿ ಸುಳ್ಳು ತಕರಾರು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪತ್ನಿ ನನ್ನ ಮತ್ತು ನನ್ನ ಕುಟುಂಬದವರ ವಿರುದ್ಧ ಅರಸೀಕೆರೆ ನ್ಯಾಯಾಲಯದಲ್ಲಿ ವರದಕ್ಷಿಣೆ ಕಿರುಕುಳದ ಕುರಿತು ಪ್ರಕರಣವನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ನನ್ನ ಪತ್ನಿ ಗರ್ಭವತಿಯಾಗಿದ್ದರು. ನನ್ನ ಪತ್ನಿ ಗರ್ಭವತಿಯಾಗಿದ್ದು ನಾನು ಮತ್ತು ನನ್ನ ತಂದೆ ತಾಯಿ ಮಾನಸಿಕ ಹಿಂಸೆ ನೀಡಿದ ಕಾರಣ ಆಕೆಗೆ ಗರ್ಭಪಾತ ಆಗಿರುತ್ತದೆ ಎಂದರೆ ಸರಿಯಲ್ಲ.

ನಮ್ಮ ಕುಟುಂಬಕ್ಕೆ ಬಾಣಾವರದ ಬಿ.ಹೆಚ್. ರಸ್ತೆಯಲ್ಲಿ ಸುಮಾರು 10 ನಿವೇಶನಗಳಿದ್ದು, ಬಾಣಾವರ ಗ್ರಾಮದಲ್ಲಿ ನಮ್ಮ ಕುಟುಂಬಕ್ಕೆ ಸೇರಿದ ಜಮೀನುಗಳಿದ್ದು, ನಮಗೆ ಸೇರಿದ ಬೀರಲಿಂಗೇಶ್ವರ ಪ್ರಾವಿಜನ್ ಸ್ಟೋರ್ ಕೂಡ ಇದ್ದು ಸದರಿ ಎಲ್ಲಾ ಮೂಲಗಳಿಂದ ವಾರ್ಷಿಕ ಸುಮಾರು 25 ಲಕ್ಷ ಆದಾಯ ಬರುತ್ತದೆ ಎಂದರೆ ಸರಿಯಲ್ಲ. ನನ್ನ ಪತ್ನಿಗೆ ಗರ್ಭಪಾತ ಆದ ಕಾಲಕ್ಕೆ  ಕಡೂರಿನ ಬಾಲಾಜಿ ನರ್ಸಿಂಗ್ ಹೋಂ, ಶಿವಮೊಗ್ಗದ ಮಲ್ನಾಡ್ ಆಸ್ಪತ್ರೆ, ಮಂಗಳೂರಿನ ಕೆಎಂಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು ಸದರಿ ಕಾಲಕ್ಕೆ ಸುಮಾರು 5 ರಿಂದ 6 ಲಕ್ಷ ಖರ್ಚು ಆಗಿರುತ್ತದೆ ಎಂದರೆ ಸಾಕ್ಷಿ ಅಷ್ಟು ಖರ್ಚು ಆಗಿದ್ದು ಸದರಿ ಖರ್ಚನ್ನು ನಾನೇ ನೀಡಿರುತ್ತೇನೆ ಎಂದು ಹೇಳುತ್ತಾರೆ. ಸದರಿ 5 ರಿಂದ 6 ಲಕ್ಷ ಹಣವನ್ನು ಅರ್ಜಿದಾರರ ತಂದೆ ತಾಯಿಯೇ ಸಾಲ ಮಾಡಿ ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಬಳಿ ಕೆಲವೊಂದು ವೈದ್ಯಕೀಯ ದಾಖಲೆಗಳಿದ್ದು ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ನಾನು ಮತ್ತು ನನ್ನ ಪತ್ನಿ ಸುಮಾರು 3 ತಿಂಗಳ ಕಾಲ ಅನ್ಯೋನ್ಯವಾಗಿ ಇದ್ದೆವು.

ನನ್ನ ಪತ್ನಿ 3 ತಿಂಗಳ ನಂತರ ಕಡೂರಿಗೆ ಬಂದ ಮೇಲೆ ನಾನು ಒಂದು ವಾರದ ನಂತರ ಮತ್ತು 15 ದಿನಗಳ ನಂತರ 2 ಬಾರಿ ಕಡೂರಿಗೆ ಬಂದಿದ್ದೆನು. ನಂತರದಲ್ಲಿ ನಾನು ಅರ್ಜಿದಾರರ

ಮನೆಗೆ ಹೋಗಿಲ್ಲ. ನಾನು ಜೀವನ ಮಾಡುವ ರೀತಿಯಲ್ಲಿಯೇ ನನ್ನ ಪತ್ನಿ ಜೀವನ ಮಾಡಲು ಮಾಸಿಕ ರೂ.25,000/- ಬೇಕಾಗುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(**ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸ ಇ ಎ ಒ

(ರಘುರಾಮ. ಎನ್.ಎಸ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.